# ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

MD RGRHCL 01 GEN 65 2002 /16605 Date: 25.09.2012

ರಿಗೆ,

ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು,
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು,
ರಾಜ್ಯದ ಎಲ್ಲಾ ಸ್ಥಳೀಯ ಸಂಸ್ಥೆಗಳ ಆಯುಕ್ತರು/ಪೌರಾಯುಕ್ತರು/ಮುಖ್ಯಾಧಿಕಾರಿಗಳು,

ಮಾನ್ಯರೇ,

ವಿಷಯ: : ಮಣಿ ಎಂಟರ್ ಪ್ರೈಸಸ್, ಹೂವಿನಹಡಗಲಿ ಇವರು ತಯಾರಿಸುತ್ತಿರುವ "ಜೀವನ ಜ್ಯೋತಿ" ಎಂಬ ಕಡಿಮೆ ಹೊಗೆಯ ಸ್ಟವ್‌ಗಳನ್ನು ವಿವಿಧ ವಸತಿ ಯೋಜನೆಗಳಡಿ ಆಯ್ಕೆಯಾದ ಫಲಾನುಭವಿಗಳ ಮನೆಗಳಲ್ಲಿ ಅಳವಡಿಸುವ ಬಗ್ಗೆ.

ಉಲ್ಲೇಖ 1 ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ಗದಗ ಇವರ ಪತ್ರ ಸಂಖ್ಯೆ: ಜಿಪಂಗ/ಗ್ರಾಪಂ/ಬಸವ ವಸತಿ/2011-12/1570, ದಿನಾಂಕ: 19.07.2012

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ಗದಗ ಇವರು ನಿಗಮಕ್ಕೆ ಬರೆದಿರುವ ಪತ್ರದಲ್ಲಿ ಮಣಿ ಎಂಟರ್ ಪ್ರೈಸಸ್, ಹೂವಿನಹಡಗಲಿ ಇವರು "ಜೀವನ ಜ್ಯೋತಿ" ಎಂಬ ಕಡಿಮೆ ಹೊಗೆಯ ಸ್ಟವ್‌ಗಳನ್ನು ತಯಾರಿಸಿ, ಮಾರುಕಟ್ಟೆಗೆ ಬಿಡುಗಡೆ ಮಾಡಿದ್ದು, ಗದಗ ತಾಲ್ಲೂಕಿನ ಬಿಂಕದಕಟ್ಟಿ ಗ್ರಾಮ ಪಂಚಾಯತಿಯ ವಸತಿ ಯೋಜನೆಯ ಫಲಾನುಭವಿಗಳಿಗೆ ಪ್ರಾಯೋಗಿಕವಾಗಿ ಸ್ಟವ್‌ಗಳನ್ನು ಸರಬರಾಜು ಮಾಡಿದ್ದು, ಸದರಿ ಫಲಾನುಭವಿಗಳಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿರುವುದಾಗಿ ಸದರಿ ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಗಳು ತಿಳಿಸಿದ್ದು, ಸದರಿ ಸ್ಟವ್‌ಗಳ ಬಳಕೆಯ ಬಗ್ಗೆ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳಿಗೆ ತಿಳಿಸಬಹುದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

ಈ ವಿಷಯಕ್ಕೆ ಸಂಬಂಧಿಸಿಂದಂತೆ ಎಲ್ಲಾ ಅನುಷ್ಠಾನಾಧಿಕಾರಿಗಳಿಗೆ ತಿಳಿಸಬಯಸುವುದೇನೆಂದರೆ, ಮಣಿ ಎಂಟರ್ ಪ್ರೈಸಸ್, ಹೂವಿನಹಡಗಲಿ ಇವರು ಮಾರುಕಟ್ಟೆಗೆ ಬಿಡುಗಡೆ ಮಾಡಿರುವ "ಜೀವನ ಜ್ಯೋತಿ" ಎಂಬ ಕಡಿಮೆ ಹೊಗೆಯ ಸ್ಟವ್‌ಗಳನ್ನು ವಿವಿಧ ವಸತಿ ಯೋಜನೆಗಳಡಿ ಆಯ್ಕೆಯಾಗಿ, ಮನೆಯನ್ನು ಪೂರ್ಣಗೊಳಿಸಿಕೊಂಡಿರುವ ಫಲಾನುಭವಿಗಳಲ್ಲಿ ಆಸಕ್ತಿ ಇರುವ ಫಲಾನುಭವಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಖರೀದಿಸಿ ಅಳವಡಿಸಿಕೊಳ್ಳಬಹುದಾಗಿದ್ದು, ಈ ಬಗ್ಗೆ ತಮ್ಮ ಜಿಲ್ಲೆ/ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ನಗರ ಸ್ಥಳೀಯ ಸಂಸ್ಥೆ/ಗ್ರಾಮ ಪಂಚಾಯತಿಗಳಿಗೆ ಮಾಹಿತಿ ನೀಡಲು ಕೋರಿದೆ ಹಾಗೂ ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ "ಜೀವನ ಜ್ಯೋತಿ" ಸ್ಟವ್‌ಗಳ ಉತ್ಪಾದಕರನ್ನು ಸಂಪರ್ಕಿಸಬಹುದಾಗಿರುತ್ತದೆ.

ವಿಳಾಸ: ಮಣಿ ಎಂಟರ್‌ಪ್ರೈಸಸ್, ನಂ: 147, 8ನೇ ವಾರ್ಡ್, ರೇಣುಕಾಚಾರ್ಯ ನಗರ, ಹೂವಿನಹಡಗಲಿ, ಬಳ್ಳಾರಿ ಜಿಲ್ಲೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

N.S.

ಎನ್. ಎಸ್. ಮಹಾದೇವ ಪ್ರಸಾದ್
ವ್ಯವಸ್ಥಾಪಕ ನಿರ್ದೇಶಕರು (ಪ್ರ)

ಪ್ರತಿಯನ್ನು:

1. ಮಣಿ ಎಂಟರ್‌ಪ್ರೈಸಸ್, ನಂ: 147, 8ನೇ ವಾರ್ಡ್, ರೇಣುಕಾಚಾರ್ಯ ನಗರ, ಹೂವಿನಹಡಗಲಿ, ಬಳ್ಳಾರಿ ಜಿಲ್ಲೆ ಇವರ ಮಾಹಿತಿಗಾಗಿ ಕಳುಹಿಸಿಕೊಡಲಾಗಿದೆ.



ನೊಂದಾಯಿತ ಕಛೇರಿ : #1,2,3,4, ಐ.ಟಿ. ಪಾರ್ಕ್, 1ನೇ ಮಹಡಿ, 4ನೇ ಮುಖ್ಯರಸ್ತೆ, ರಾಜಾಜಿನಗರ ಕೈಗಾರಿಕಾ ಪ್ರದೇಶ, ರಾಜಾಜಿನಗರ, ಬೆಂಗಳೂರು – 560 010.
ಕಛೇರಿ : 91-80-2311 8888, Extn.: ಪಿಐ ವಿಭಾಗ- 25 to 30, ತಾಂತ್ರಿಕ - 34 to 36, ಆರ್ಥಿಕ - 37 to 40, ಆಡಳಿತ - 42 & 43, ಗಣಕ ವಿಭಾಗ- 45 to 47,
ಫ್ಯಾಕ್ಸ್ : 91-80-2314 5085, ಈ ಮೇಲ್: rgrhcl@nic.in, rgrhcl@rediffmail.com ವೆಬ್‌ಸೈಟ್ : http://ashraya.kar.nic.in